# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\4265\2015\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:12/06/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಪಂಡಿತಾರಾಧ್ಯ ಬಿನ್ ಲೇ.ಮಲ್ಲಾರಾಧ್ಯ, ಗುರುಕೃಪ, 3ನೇ ಕ್ರಾಸ್, ಬಾಲಾಜಿ ಥಿಯೇಟರ್ ರಸ್ತೆ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಹಾಸನ ಜಿಲ್ಲೆ ಚನ್ನರಾಯಪಟ್ಟಣ ನಗರ ಬಾಲಾಜಿ ಥಿಯೇಟರ್ ರಸ್ತೆ 3ನೇ ಕ್ರಾಸ್ ಗುರುಕೃಪ ನಿವಾಸಿಯಾದ ಶ್ರೀ.ಪಂಡಿತಾರಾಧ್ಯ ಬಿನ್ ಮಲ್ಲಾರಾಧ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಮೈಸೂರು ನಗರ ನ್ಯಾಯಾಲಯ ಸಂಕೀರ್ಣ 1ನೇ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕರಾದ ಶ್ರೀ.ಕೆ.ಎಂ.ಲೋಕೇಶ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರ ಸೊಸೆ ಶ್ರೀಮತಿ.ಮಂಗಳಾ.ಬಿ.ಪಿ ಕೋಂ ನಾಗೇಶ್.ಪಿ ರವರ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡುವ ಬಗ್ಗೆ ಮೈಸೂರು ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಲಾದ ಅಸಲು ದಾವೆ ಸಂ:765/2014ರಲ್ಲಿ ಏಕಪಕ್ಷೀಯ ಡಿಕ್ರಿ ಆಗಿದ್ದು, ಸರ್ಕಾರಕ್ಕೆ ಕಾನೂನು ಅಭಿಪ್ರಾಯ ವರದಿ ಸಲ್ಲಿಸಲು ಎದುರುದಾರರು ದೂರುದಾರರಿಂದ ₹500/- ಲಂಚ ಪಡೆದಿದ್ದು, ಒಂದು ವಾರದ ಬಳಿಕ ₹300/- ಅನ್ನು ವಾಪಸ್ ಕೊಟ್ಟಿದ್ದಾರೆಂದು ಉಳಿದ ₹200/-ನ್ನು ವಾಪಸ್ ನೀಡಿರುವುದಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ರವರಿಗೆ ಆದೇಶಿಸಲಾಗಿ, ಆರಕ್ಷಕ ಉಪಾಧೀಕ್ಷಕರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ತನಿಖಾ ವರದಿಯಲ್ಲಿ –

ದೂರುದಾರರ ಸೊಸೆ ಶ್ರೀಮತಿ.ಬಿ.ಪಿ.ಮಂಗಳಾ ರವರ ಜನ್ಮ ದಿನಾಂಕದ ತಿದ್ದುಪಡಿಗೆ ಸಂಬಂಧಿಸಿದಂತೆ ಮೈಸೂರಿನ 2ನೇ ಅಪರ 1ನೇ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಿ:08/12/14ರಂದು ಏಕಪಕ್ಷೀಯವಾಗಿ ತೀರ್ಮಾನವಾಗಿದ್ದು, ಇದನ್ನು ಆಕ್ಷೇಪಿಸಿ ದೂರುದಾರರು ಎದುರುದಾರರನ್ನು ಸಂಪರ್ಕಿಸಿ, ಮಿಸಲೇನಿಯಸ್ ಅರ್ಜಿ ಸಲ್ಲಿಸಲು ಕೋರಿ ₹500/- ಗಳನ್ನು ಸ್ವಇಚ್ಛೆಯಿಂದ ದೂರುದಾರರೇ ನೀಡಿ, ಪುನಃ ಅವರ ಕೆಲಸದ ಬಗ್ಗೆ ನ್ಯಾಯಾಲಯಕ್ಕೆ ಬಂದು ಅರ್ಜಿ ಸಲ್ಲಿಸುವುದು ಬೇಡ ಹಾಗೆಯೇ ಅಭಿಪ್ರಾಯ ನೀಡಬೇಕೆಂದು ಎದುರುದಾರರಿಗೆ ಒತ್ತಾಯ ಮಾಡಿದ್ದರಿಂದ, ಅವರ ಮಾತಿಗೆ ಒಪ್ಪದ ಎದುರುದಾರರು, ನ್ಯಾಯಾಲಯದ ವ್ಯವಹರಣೆಯ ಖರ್ಚಿಗೆಂದು ದೂರುದಾರರು ನೀಡಿದ್ದ ₹500/-ರಲ್ಲಿ ಆ ವೇಳೆಗಾಗಲೇ ನ್ಯಾಯಾಲಯದ ಶುಲ್ಕ, ಟೈಪಿಂಗ್ ಶುಲ್ಕ, ಸ್ಟಾಂಪ್ ಮತ್ತು ಪ್ರಮಾಣ ಪತ್ರಕ್ಕಾಗಿ ಖರ್ಚು ಮಾಡಿದ್ದ ₹200/-ಗಳನ್ನು ಕಳೆದು ₹300/-ಗಳನ್ನು ಎದುರುದಾರರೇ ಸ್ವಇಚ್ಛೆಯಿಂದ ದೂರುದಾರರಿಗೆ ಹಿಂದಿರುಗಿಸಿರುವುದಾಗಿ ಎದುರುದಾರರು ನ್ಯಾಯಾಲಯದ ಆದೇಶದ ಮೇಲೆ ಅಭಿಪ್ರಾಯ ನೀಡಿಲ್ಲವೆಂಬ ಹಿನ್ನೆಲೆಯಲ್ಲಿ ಅವರಿಗೆ ಕಿರುಕುಳ ನೀಡುವ ಉದ್ದೇಶದಿಂದ, ಸದರಿ ದೂರನ್ನು ಸಲ್ಲಿಸಿದೆಯೆಂದು ವಿಚಾರಣೆಯಿಂದ ತಿಳಿದು ಬಂದಿದೆಯೆಂದು ಹೇಳಿದ್ದಾರೆ.

4. ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ-

ತನಿಖಾಧಿಕಾರಿಗಳು ಸಾಕ್ಷಿದಾರರನ್ನು ತಮ್ಮ ಸಮಕ್ಷಮ ವಿಚಾರಣೆ ನಡೆಸದೇ ಏಕಪಕ್ಷೀಯವಾಗಿ ತೀರ್ಮಾನ ಕೈಗೊಂಡಿದ್ದು, ಪುನರ್ ಅರ್ಜಿ ಸಲ್ಲಿಸಲು ತಾವಾಗಲೀ, ತಮ್ಮ ಸೊಸೆಯಾಗಲೀ ಯಾವುದೇ ವಕಾಲತ್ತು ಅಥವಾ ಅರ್ಜಿಯನ್ನು ಎದುರುದಾರರಿಗೆ ನೀಡಿಲ್ಲ. ಎದುರುದಾರರು ಸುಳ್ಳು ಹೇಳುತ್ತಿರುವುದಾಗಿ ಹೇಳಿದ್ದಾರೆ.

5. ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಈ ಮೊದಲೇ ಮೈಸೂರು ಲೋಕಾಯುಕ್ತ ಪೊಲೀಸರಿಗೆ ನೀಡಿರುವ ಹೇಳಿಕೆಯನ್ನೇ ಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತಾ, ಅಸಲು ದಾವೆಯ ವಾದಿ ಮತ್ತು ಅವರ ಪತಿ ದೂರುದಾರರನ್ನು ಮುಂದಿಟ್ಟುಕೊಂಡು ತಮ್ಮ ಕೆಲಸವನ್ನು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಒತ್ತಡ ಹೇರಿ, ತಮ್ಮ ಕೆಲಸ ಮಾಡಿಸಿಕೊಂಡಿದ್ದಾರೆ. ಕಾನೂನು ಪ್ರಕಾರ ಜಿಲ್ಲಾ ಸರ್ಕಾರಿ ವಕೀಲರ ಅಭಿಪ್ರಾಯವನ್ನು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಪಡೆಯದೇ, ಯಾವುದೇ ತೀರ್ಪನ್ನು ಅನುಷ್ಠಾನಗೊಳಿಸಲಾಗುವುದಿಲ್ಲ. ಆದರೂ ಸಹ ಒ.ಎಸ್.ಸಂ.765/2014ರ ಎದುರುದಾರರನ್ನು ಏಕಪಕ್ಷೀಯರೆಂದು ಪರಿಗಣಿಸುವಂತೆ ನೋಡಿಕೊಂಡು ತದನಂತರ ಕಾನೂನು ಬಾಹಿರ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ದೂರುದಾರರ ಮಗ ಸರ್ಕಾರಿ ವೈದ್ಯರಾಗಿದ್ದು, ಅವರು ತಮ್ಮ ತಂದೆಯ ಮುಖಾಂತರ ಈ ರೀತಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಜನ್ಮದಿನಾಂಕದ ತಿದ್ದುಪಡಿಗೆ ಹಾಕಿದ ದಾವೆ ಡಿಕ್ರಿಯಾದರೆ ಮೇಲ್ಮನವಿ ಸಲ್ಲಿಸಲು ಸರ್ಕಾರದ ಕಾನೂನು ಇಲಾಖೆ ತಮಗೆ ತಿಳಿಸಿದೆ.

ಆದರೆ, ಈ ಪ್ರಕರಣದಲ್ಲಿ ದೂರುದಾರರ ಮತ್ತು ಅವರ ಮನೆಯವರ ಒತ್ತಡಕ್ಕೆ ಮಣಿದು ಅವರಿಗೆ ಹೆದರಿಕೊಂಡು ಡಿಕ್ರಿ ಅನುಷ್ಠಾನಗೊಳಿಸಿದ್ದಾರೆ. ಈ ರೀತಿಯ ಪ್ರಕ್ರಿಯೆ ಪ್ರಾರಂಭಿಸಿದ ನಂತರವಷ್ಟೇ ದೂರುದಾರರು ತಮ್ಮ ಹತ್ತಿರ ಬಂದು ಹಿಂದೆ ನಡೆದ ಯಾವುದೇ ವಿಷಯವನ್ನು ತಮ್ಮಲ್ಲಿ ತಿಳಿಸದೇ ಅವರೇ ತಪ್ಪುಗಳನ್ನು ಎಸಗಿ ತಮ್ಮ ಮೇಲೆ ಸುಳ್ಳು ದೂರನ್ನು ಸಲ್ಲಿಸಿ, ಬ್ಲ್ಯಾಕ್‌ಮೇಲ್ ಮಾಡಲು ಶುರು ಮಾಡಿದ್ದಾರೆಂದು ಹೇಳಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ದೂರದಾರರ ಸೊಸೆಯೆಂದು ಹೇಳಲಾದ ಶ್ರೀಮತಿ.ಬಿ.ಪಿ.ಮಂಗಳಾ ಕೋಂ ಡಾ||ನಾಗೇಶ್.ಪಿ ರವರ ಜನ್ಮ ದಿನಾಂಕದ ತಿದ್ದುಪಡಿಗೆ ಸಂಬಂಧಿಸಿದಂತೆ ಮೈಸೂರಿನ 2ನೇ ಅಪರ 1ನೇ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಒ.ಎಸ್.ಸಂ.765/2014ನ್ನು ಸಲ್ಲಿಸಿದ್ದು, ಸದರಿ ದಾವೆಯು ದಿ:08/12/14ರಂದು ಏಕಪಕ್ಷೀಯ ಡಿಕ್ರಿ ಆಗಿರುವುದು ತೀರ್ಪು ಮತ್ತು ಡಿಕ್ರಿಯ ನಕಲು ಪ್ರತಿಯಲ್ಲಿ ಕಂಡು ಬಂದಿದೆ;

2) ಸರ್ಕಾರದ ಸಂಬಂಧಪಟ್ಟ ಇಲಾಖೆಯವರು ದಾವೆ ಡಿಕ್ರಿಯಾದ ಸಂಬಂಧ ಕಾನೂನು ಅಭಿಪ್ರಾಯವನ್ನು ನೀಡುವಂತೆ ಕೋರಿದ್ದರೂ ಕೂಡ ಎದುರುದಾರರು ಉದ್ದೇಶಪೂರ್ವಕವಾಗಿ ಅಭಿಪ್ರಾಯವನ್ನು ನೀಡಿಲ್ಲ ಹಾಗೂ ಅಭಿಪ್ರಾಯ ಕಳುಹಿಸಲು ಅವರು ದೂರುದಾರರಿಂದ ₹500/- ಲಂಚವನ್ನು ಪಡೆದಿದ್ದಾರೆಂದು ದೂರುದಾರರು ಆಪಾದನೆ ಮಾಡಿದ್ದು, ದೂರುದಾರರ ಆಪಾದನೆಯನ್ನು ಎದುರುದಾರರು ಅಲ್ಲಗಳೆದಿದ್ದಾರೆ;

3) ಎದುರುದಾರರು ಮೈಸೂರಿನ ಜಿಲ್ಲಾ ನ್ಯಾಯಾಲಯದಲ್ಲಿ 2009 ರಿಂದ ಗುತ್ತಿಗೆ ಆಧಾರದ ಮೇಲೆ ಸರ್ಕಾರಿ ವಕೀಲರಾಗಿ ಕರ್ತವ್ಯ ಮಾಡುತ್ತಿರುವುದು ಸದರಿಯವರು ತನಿಖಾಧಿಕಾರಿಗಳಿಗೆ ದಿ:14/03/16ರಂದು ನೀಡಿದ ಹೇಳಿಕೆಯಲ್ಲಿ ಕಂಡು ಬಂದಿದೆ;

4) ಒ.ಎಸ್.ನಂ.765/2014ರ ಡಿಕ್ರಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಅಭಿಪ್ರಾಯ ಕೋರಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ತುಮಕೂರು (ದ) ರವರು ಅಭಿಯೋಗ ಉಪ ನಿರ್ದೇಶಕರು (ಸಿವಿಲ್ ವಿಭಾಗ), ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು ರವರಿಗೆ ದಿ:06/02/15ರಂದು ಪತ್ರವನ್ನು ಬರೆದಿದ್ದು, ಡಿಕ್ರಿಯ ದೃಢೀಕೃತ ಪ್ರತಿಯನ್ನು ನ್ಯಾಯಾಲಯದಿಂದ ಪಡೆದು, ಕಛೇರಿಗೆ ಸಲ್ಲಿಸುವಂತೆ ಸೂಚಿಸಿ, ದಿ:21/02/15ರಂದು ಕಾನೂನು ಅಧಿಕಾರಿ(ಕಿರಿಯ) (ಸಿವಿಲ್), ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು ರವರು ಜಿಲ್ಲಾ ಸರ್ಕಾರಿ ವಕೀಲರು, ಸಿವಿಲ್ ನ್ಯಾಯಾಧೀಶರು (ಕಿ.ವಿ.) ನ್ಯಾಯಾಲಯ, ಮೈಸೂರು ರವರಿಗೆ ಸದರಿ ಪತ್ರದಲ್ಲಿ ಸೂಚಿಸಿರುವುದು ಕಂಡು ಬಂದಿದೆ;

5) ಒ.ಎಸ್.ನಂ.765/2014ರ ದಾವೆಯಲ್ಲಿ ದಿ:08/12/14ರಂದು ಏಕಪಕ್ಷೀಯವಾಗಿ ತೀರ್ಮಾನಿಗಿದ್ದರೂ ಸಿವಿಲ್ ಜಡ್ಜ್ (ಕಿರಿಯ ವಿಭಾಗ), ಮೈಸೂರು ರವರ ನ್ಯಾಯಾಲಯದ ಜಿಲ್ಲಾ ಸರ್ಕಾರಿ ವಕೀಲರಾಗಿ ಎದುರುದಾರರು ತೀರ್ಪು ಮತ್ತು ಡಿಕ್ರಿಯ ಪ್ರತಿಯನ್ನು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ

ನಿರ್ದೇಶಕರ ಕಛೇರಿಗೆ ದಿ:21/02/15ರವರೆಗೂ ಕಳುಹಿಸಿಲ್ಲವೆಂದು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿಯ ಕಾನೂನು ಅಧಿಕಾರಿ (ಕಿರಿಯ) (ಸಿವಿಲ್) ರವರು ಎದುರುದಾರರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ. ಸರ್ಕಾರವು ಪಕ್ಷಗಾರರಾಗಿರುವ ದಾವೆಯಲ್ಲಿ ಸರ್ಕಾರವನ್ನು ಪ್ರತಿನಿಧಿಸುವುದು ಮತ್ತು ನ್ಯಾಯಾಲಯದ ವ್ಯವಹರಣೆ \ ಆದೇಶ \ ತೀರ್ಪು \ ಡಿಕ್ರಿ ಪ್ರತಿಗಳನ್ನು ನ್ಯಾಯಾಲಯದಿಂದ ಪಡೆದು ಅಭಿಯೋಗ ಇಲಾಖೆಗೆ ಅಭಿಪ್ರಾಯದೊಂದಿಗೆ ಕಳುಹಿಸುವುದು ಸರ್ಕಾರಿ ವಕೀಲರ ಕರ್ತವ್ಯವಾಗಿದ್ದು, ಅಸಲು ದಾವೆ ಸಂ:765/2014ರಲ್ಲಿ ದಿ:08/12/14ರಂದು ತೀರ್ಪಾಗಿದ್ದರೂ ದಿ:21/02/15ರವರೆಗೂ ಎದುರುದಾರರು ಸದರಿ ದಾವೆಯ ತೀರ್ಪು \ ಡಿಕ್ರಿ ಪ್ರತಿಗಳನ್ನು ಕಳುಹಿಸದೇ ಇರುವುದು ತನಿಖಾಧಿಕಾರಿಗಳು ಹಾಜರುಪಡಿಸಿದ ದಾಖಲೆಗಳಿಂದ ಸ್ಪಷ್ಟವಾಗಿ ಕಂಡು ಬಂದಿದೆ.

7. ಆದ್ದರಿಂದ, ಸದರಿ ಎದುರುದಾರರ ಕರ್ತವ್ಯ ಲೋಪ ಕಂಡು ಬರುವುದರಿಂದ, ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎದುರುದಾರರನ್ನು ಸರ್ಕಾರಿ ವಕೀಲರ ಸೇವೆಯಿಂದ ತೆಗೆದು ಹಾಕಲು ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 1/6

(ನ್ಯಾಯಾಮೂರ್ತಿ ಎನ್.ಆನಂದ)

ಉಪಲೋಕಾಯುಕ್ತ,

ಕರ್ನಾಟಕ ರಾಜ್ಯ.

1/6.